ಹಾಕಬೇಕು. ಆ ದೃಷ್ಟಿಯಿಂದ ಕೆಲವು ವಿವರಗಳನ್ನು ಕೇಳತಕ್ಕಂಥದ್ದು ಅಷ್ಟೇ ಹೊರತಾಗಿ ಮತ್ತೆ ಇನ್ನೇನೂ ಇಲ್ಲ.

ಅಧ್ಯಕ್ಷರು: ತೆಗೆದುಕೊಳ್ಳೋಣ, we will take it up. ಮಾನ್ಯ ಶಿವಪ್ಪನವರೇ, ತಾವು ಶೂನ್ಯ ವೇಳೆಯಲ್ಲಿ ಏನೋ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಕೇಳಿದ್ದೀರಿ. ತಾವು ಈಗ ಪ್ರಸ್ತಾಪ ಮಾಡಿ.

(ಆ) ಕೊಡಲಿಪೇಟೆ ಸೊಸೈಟಿಯಲ್ಲಿನ ಅವ್ಯವಹಾರಗಳು

+ ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ಕಳೆದ ಸದನದಲ್ಲಿ ಕೊಡಲಿಪೇಟೆ ಸೊಸೈಟಿ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಸಹಕಾರ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಅವರು ಏನು ಹೇಳಿದ್ದಾರೆಂದರೆ- ಇದರಲ್ಲಿ ಅವ್ಯವಹಾರ ನಡೆದಿರುವುದು ಸರಿ, ನಿಯಮ 64ರ ಪ್ರಕಾರ ಶಾಸನಬದ್ಧ ವಿಚಾರಣೆಗೆ ಆದೇಶ ನೀಡಿದ್ದರೂ, ಕ್ರಮಬದ್ಧತೆಯನ್ನು ಪ್ರಶ್ನೆ ಮಾಡಿ ಆದೇಶವನ್ನು ಮಾನ್ಯ ಉಚ್ಚನ್ಯಾಯಾಲಯ ರದ್ದುಪಡಿಸಿದೆ. ಅದಕ್ಕೆ ಬೇರೆ ವ್ಯವಸ್ಥೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ಈ ಹೇಳಿಕೆಯನ್ನು ತಾವು ಫೆಬ್ರವರಿ 2ನೇ ತಾರೀಖಿನಂದು ಕೊಟ್ಟಿದ್ದೀರಿ. ಅದರ ನಂತರ ಇಲ್ಲಿಯವರೆಗೆ ಏನಾಯಿತು ಎಂಬುದು ಗೊತ್ತಾಗಲಿಲ್ಲ. ಇವರು ರಾಜಕೀಯವಾಗಿ ತುಂಬಾ ಪ್ರಬಲರಾಗಿದ್ದಾರೆಂದು ನಾನು ಹೇಳಿದಾಗ ಮಾನ್ಯ ಸಹಕಾರ ಸಚಿವರು ಒಂದು ಮಾತನ್ನು ಹೇಳಿದರು. ಹಾಗೆಯೇ 'ಅವರು ಯಾವ ಪಾರ್ಟಿಯವರು ಎಂದು ಹೇಳಿ' ಆ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೂ ಸಹ ಆವಾಗ ಪ್ರವೇಶ ಮಾಡಿದ್ದರು. ಆ ಪ್ರಬಲರು ದಳದ ಪ್ರಮುಖರು ಎಂದು ನಾನು ಆ ಸಂದರ್ಭದಲ್ಲಿ ಹೇಳಿದ್ದೇನೆ. ಆಗ ಮಾನ್ಯ ಅಧ್ಯಕ್ಷರು ''ಜವಾಬ್ದಾರಿಕೆ ಇನ್ನೂ ಹೆಚ್ಚಾಯಿತು'' ಎನ್ನುವ ಮಾತನ್ನು ಹೇಳಿದ್ದಾರೆ. ಸತ್ಯ ಹೊರಕ್ಕೆ ಬರಲಿ ಎಂದು ಮಾನ್ಯ ಅಧ್ಯಕ್ಷರು ಆಗ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ. ನಂತರ ''ಮಾನ್ಯ ಗೌರವಾನ್ವಿತ ಸದಸ್ಯರು ತಂದಂಥ ಗಮನಸೆಳೆಯುವ ಸೂಚನೆ ಮೇಲೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ, ಬಹುಶಃ ನಾನು ಹಲವಾರು ಸಂದರ್ಭಗಳಲ್ಲಿ ಹೇಳಿದ್ದೇನೆ, ಯಾವ ಯಾವ ಪಕ್ಷದವರು ಇದ್ದಾರೆಂದು ಅವರ ಮುಖ ನೋಡುವುದಿಲ್ಲ, ತಪ್ಪು ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ, ಆದರೆ ದುರ್ದೈವ ಏನಾಗಿದೆಯೆಂದರೆ, ನಿಯಮ 64ರ ಪ್ರಕಾರ ವಿಚಾರಣೆ ಮಾಡಿದ ಮೇಲೆ ನಾವು ರದ್ದು ಮಾಡಬೇಕಾಗುತ್ತದೆ. ಯಾವುದೇ ಸಂಘವನ್ನು ಸುಮ್ಮನೆ ಹೋಗಿ ರದ್ದು ಮಾಡಿದರೆ, ಅವರು ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ'' ಈ ರೀತಿಯಾಗಿ ಮಾನ್ಯ ಮಂತ್ರಿಗಳು ಕಾನೂನಿನ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಸರ್ಕಾರ 64ನೇ ನಿಯಮದ ಪ್ರಕಾರ ವಿಚಾರಣೆ ಮಾಡಲಿಕ್ಕೆ ಆ ಸೊಸೈಟಿಗೆ ಯಾವ ಅಧಿಕಾರಿಯನ್ನು ಹಾಕಿದ್ದರೋ, ಆ ಅಧಿಕಾರಿ ಇದನ್ನು ವಿಚಾರಣೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ರೀತಿಯಲ್ಲಿ ಆ ಸೊಸೈಟಿಯವರು ಸ್ಟೇ

ತಂದರು. ಆದ್ದರಿಂದ ಅಲ್ಲಿಗೆ ಬೇರೆ ಅಧಿಕಾರಿಯನ್ನು ನೇಮಕ ಮಾಡಿ ಸರ್ಕಾರ ವಿಚಾರಣೆ ಮಾಡಿಸಬೇಕಾಗುತ್ತದೆ. ಪುನಃ ವಿಚಾರಣೆಗೆಂದು ತಾವು ನೇಮಿಸಿದ ಅಧಿಕಾರಿಯೂ ಕೂಡ ಅದೇ ಗ್ರೇಡ್‌ನವನು ಆಗಿರುವುದರಿಂದ 2ನೇ ಬಾರಿಯೂ ಸಹ ಆ ಸೊಸೈಟಿಯವರು ಸ್ಟೇ ತಂದಿದ್ದಾರೆ. ಅಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಅವ್ಯವಹಾರ ಆಗಿರತಕ್ಕಂಥದ್ದಾಗಿದೆ. ಫೆಬ್ರವರಿ ತಿಂಗಳಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೆ ಈಗ ಸೆಪ್ಟೆಂಬರ್ ತಿಂಗಳಿನಲ್ಲಿ ಇದ್ದೇವೆ, 2ನೇ ಸಲವೂ ಸಹ ಅವರು ಸ್ಟೇ ತಂದಿದ್ದಾರೆ ಬಹುಶಃ ಇದು ಮಾನ್ಯ ಸಚಿವರ ಗಮನಕ್ಕೇ ಬರಲಿಲ್ಲವೆಂದು ತೋರುತ್ತದೆ. ಆದ್ದರಿಂದ ಈಗ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕ್ಕೊಳ್ಳುವುದೇನೆಂದರೆ ಈ ತರಹ ಸೊಸೈಟಿಗಳಲ್ಲಿ ಆದರೆ ತುಂಬಾ ಕಷ್ಟವಾಗುತ್ತದೆ. 9 ತಿಂಗಳಾದರೂ ವಿಚಾರಣೆ ಮಾಡಿರುವಂಥದ್ದು ಸರಿಯಿಲ್ಲವೆಂದು ಪುನಃ ಅದೇ ತರಹದ ಅಧಿಕಾರಿ ಹೋಗಿ ವಿಚಾರಣೆ ಮಾಡುವುದಾದರೆ, ಅದೇ ತರಹದ ಅಧಿಕಾರಿಯನ್ನು ಯಾರು ನೇಮಕ ಮಾಡಿ ಕಳುಹಿಸಿದರೋ ಅವರ ಮೇಲೆಯೂ ಸಹ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಸೊಸೈಟಿಯ ಸಂಬಂಧಪಟ್ಟವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಸಾಲದ ಹಣ ವಾಪಸ್ಸು ಬರುವುದಿಲ್ಲ. ಮತ್ತು ಆ ವ್ಯಕ್ತಿ ಪುನಃ ಈ ಸಲ ಸಾಲ ತೆಗೆದುಕೊಂಡಿದ್ದಾನೆ ಎಂಬ ವದಂತಿ ನನಗೆ ಬಂದಿದೆ. ಇಷ್ಟೆಲ್ಲಾ ಅವ್ಯವಹಾರಗಳು ನಡೆದಿದ್ದರೂ ಕೂಡ ಅದೇ ವ್ಯಕ್ತಿ ಮತ್ತೆ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಸಾಲ ತೆಗೆದುಕೊಂಡಿದ್ದಾನೆ ಎನ್ನುವ ವದಂತಿ ಹಬ್ಬಿದೆ. ಆದರೆ ಅದರ ಸರಿಯಾದಂಥ ಮಾಹಿತಿ ನನ್ನಲ್ಲಿ ಇಲ್ಲ. ಆದರೂ ಅವರು ಸಾಲ ತೆಗೆದುಕೊಂಡಿದ್ದಾರೆ. ಸರ್ಕಾರ ತಕ್ಷಣ ಆ ಸೊಸೈಟಿ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಆ ಸೂಚನೆಗೆ ಸಹಿ ಮಾಡಿದ್ದೇನೆ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವಂಥ ವಿಷಯಗಳಿಗೆ ಸಹಿ ಮಾಡಿರುವವರೆಲ್ಲಾ ಮಾತನಾಡಬೇಕು ಎನ್ನುವ ಪ್ರಶ್ನೆ ಬರುವುದಿಲ್ಲ... ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಆ ಸೊಸೈಟಿಗೆ ಪುನಃ ಅಂಥ ಅಧಿಕಾರಿಯನ್ನೇ ಹಾಕಿ, ಸೊಸೈಟಿಯವರು ಸ್ಟೇ ತರುವಂಥ ವ್ಯವಸ್ಥೆ ಮಾಡಿದ್ದಾರೆಂದು ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ್ದಾರೆ. ನಾನು ಅದರ ಬಗ್ಗೆ ವಿವರವಾದ ವರದಿಯನ್ನು ತರಿಸಿಕೊಂಡು ಯಾರೇ ಆದರೂ ಕೂಡ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಕಳೆದ ಸಲವೂ ಸಹ ಸನ್ಮಾನ್ಯ ಮಂತ್ರಿಗಳು ಇದೇ ಉತ್ತರವನ್ನು ಕೊಟ್ಟಿದ್ದರು. ಸುಮಾರು 43 ಸಾವಿರ ರೂಪಾಯಿ

ದುರುಪಯೋಗವಾಗಿದೆ. ಅಲ್ಲಿ ಚಿನ್ನಪ್ಪ ಎನ್ನುವವರು ಇವತ್ತಿನ ದಿವಸ ಡಿ.ಸಿ.ಸಿ ಬ್ಯಾಂಕಿನ ಡೈರೆಕ್ಟರ್ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

ಅಧ್ಯಕ್ಷರು: ಅದರ ಮೇಲೂ ಕ್ರಮ ಜರುಗಿಸಲಿಕ್ಕೆ ಹೇಳಲಾಗುವುದು.. ಮಾನ್ಯ ಎಸ್.ಎಸ್.ಪಾಟೀಲರು, ಶ್ರೀ ಅಪ್ಪಚ್ಚುರಂಜನ್ ರವರು ಹೇಳಿದ ವಿಷಯದ ಕಡೆಗೂ ತಾವು ಗಮನಕೊಡಬೇಕು. ಸಂಬಂಧಪಟ್ಟ ಸದಸ್ಯರುಗಳು ಕೆಲವು ವಿಚಾರಗಳ ಮೇಲೆ ಈ ಸದನದಲ್ಲಿ ಹೇಳಿ ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ....

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಏಕೆಂದರೆ ಈ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಅವರೇ ಡೈರೆಕ್ಟರ್ ಆಗಿ ಬಂದರೆ ಪುನಃ ಸೊಸೈಟಿಯ ಆಡಳಿತವನ್ನು ಅವರೇ ಮಾಡುತ್ತಾರೆ....

ಅಧ್ಯಕ್ಷರು: ಅಪ್ಪಚ್ಚುರಂಜನ್‌ರವರೇ, ಒಂದ್ನಿಮಿಷ ಇರಿ, ನಿಮ್ಮ ಪರವಾಗಿ ನಾನೇ ಮಾತನಾಡುತ್ತೇನೆ. ಸದಸ್ಯರು ಇಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿ ಅದರ ಮೇಲೆ ಸರ್ಕಾರ ಏನೂ ಕ್ರಮ ಜರುಗಿಸಲಿಲ್ಲವೆಂದರೆ ಸದನಕ್ಕೆ, ಸದಸ್ಯರು ಹೇಳಿದ ಮಾತಿಗೆ ಬೆಲೆ ಬರುವುದಿಲ್ಲ. ಮಾನ್ಯ ಸಹಕಾರ ಸಚಿವರಾದ ತಾವು ಇಂಥ ವಿಚಾರಗಳಲ್ಲಿ ಬಹಳ ಪ್ರಾಮಾಣಿಕರು ಇದ್ದೀರಿ. ದಯಮಾಡಿ ಮಾನ್ಯ ಸದಸ್ಯರಾದ ಅಪ್ಪಚ್ಚುರಂಜನ್ ರವರು ಹೇಳಿರುವ ವಿಚಾರದ ಕಡೆಗೂ ಕೂಡ ಗಮನಕೊಟ್ಟು ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಆಯಿತು, ಅದನ್ನು ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು: ಆಯಿತು, ನಿಮ್ಮ ಕೆಲಸವನ್ನು ನಾನು ಮಾಡಿದ್ದೇನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಮೊನ್ನೆಯ ವಿಷಯದ ಬಗ್ಗೆ ಸಚಿವರು ಹೇಳಿಕೆಯನ್ನು ಕೊಡಲಿಲ್ಲ.

ಅಧ್ಯಕ್ಷರು: ಆನಂತರ ಮಾನ್ಯ ಸಚಿವರ ಹೇಳಿಕೆಯನ್ನು ಕೊಡಿಸುತ್ತೇನೆ.

ಇ) ಹುಣಸೂರು ವಿಧಾನ ಸಭಾಕ್ಷೇತ್ರದಲ್ಲಿ ಖಾಯಂ ಸಾಗುವಳಿ ಪತ್ರವನ್ನು ನೀಡದೇ ಇರುವ ಬಗ್ಗೆ

+ ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಕುಪ್ಪೆಕೊಳಗೊಟ್ಟ ಎನ್ನುವಂಥ ಒಂದು ಗ್ರಾಮದಲ್ಲಿ 1991ರಲ್ಲಿ ಕೇಂದ್ರ ಸರ್ಕಾರದ ಯೋಜನೆ ಮುಖಾಂತರ ಅಂದಾಜು 837 ಎಕರೆ 27 ಗುಂಟೆ ಜಮೀನನ್ನು ಸರ್ಕಾರ